ಮರದ ಥರ ಅವನ ಮೈಯಿ ವಾಲಾಡುತ್ತಿತ್ತು. ಅಪ್ಪಾ ಅವನು ದೇವತೆಗಳ ಮಗನ ಥರ ಇದ್ದ. ಅವನ ಕಂಡರೆ ಅದೇನೋ ಪ್ರೀತಿ ಬಂದುಬಿಟ್ಟಿದೆ. ಅವನ ಮೇಲೆ ಆಸೆ ಆಗತದೆ.

ಅವನು ಬಂದೂ ಬಂದೂ ನನ್ನ ಮೈನ ತಬ್ಬಿಕೋತಿದ್ದ. ನನ್ನ ಮುಡಿಯನ್ನ ಹಿಂದಕ್ಕೆ ತಳ್ಳಿ–ಮುಖಾನ ಓರೆ ಮಾಡಿ ಬಾಯೊಳಗೆ ಬಾಯಿಟ್ಟು ಇಂಪಾದ ಸದ್ದು ಬರಿಸಿದ. ಅದರಿಂದ ಖುಷಿ ತುಂಬಿ ತುಳುಕಿತು.

ಕಾಲಿಗೆ ನೀರು ಈಸಿಕೊಳ್ಳಲಿಲ್ಲ. ನಾ ಕೊಟ್ಟ ಹಣ್ಣು ಇಷ್ಟ ಆಗಲಿಲ್ಲ. 'ವ್ರತ' ಅಂದ. ನನಗೇ ಹೊಸ ಹೊಸ ಥರ ಹಣ್ಣು ಕೊಟ್ಟ. ಅವನು ಕೊಟ್ಟ ಹಣ್ಣನ್ನೆಲ್ಲ ತಿಂದೆ. ರುಚೀನೇ ಬೇರೆ. ಇವಾವೂ ಅವಕ್ಕೆ ಸಮ ಅಲ್ಲ. ಇವುಗಳ ಥರ ಅಲ್ಲ. ಅವಕ್ಕೆ ಸಿಪ್ಪೆ ಇರಲಿಲ್ಲ. ಅದರೊಳಗೆ ನಾರು, ದಿಂಡು ಇರಲಿಲ್ಲ.

ಒಂದು ಥರಾ ನೀರು ಕೊಟ್ಟ. ರುಚಿ ಅಂದರೆ ರುಚೀ. ಒಡಲ ತುಂಬಾ ಕೊಟ್ಟ. ಕುಡೀತಾ ಕುಡೀತಾ ಹಿಗ್ಗು ಏರತಾ ಹೋಯಿತು. ಭೂಮೀನೇ ತಿರುಗೋ ಥರ ಅನಿಸಿತು.

ಈ ಹೂವಿನ ಹಾರ ನೋಡಿದೆಯಾ, ಎಷ್ಟು ಚೆಂದಕ್ಕಿವೆ. ಮರದಿಂದ ಹೂ ಕಿತ್ತು ಅವನೇ ಮಾಡಿಕೊಟ್ಟದ್ದು. ಆಮೇಲೆ ಇವನ್ನ ನನ್ನ ಮೇಲೆ ಬಿಸುಟು ತಪಸ್ಸಿನಿಂದ ಬೆಳಗುತ್ತಾ ಇರೋ ಅವನ ಆಶ್ರಮಕ್ಕೆ ಹೊರಟು ಹೋದ.

ನನ್ನನ್ನು ಪರವಶಗೊಳಿಸಿ ಅವನು ಹೊರಟು ಹೋದ. ಮೈಯಲ್ಲಿ ಬೆಂಕಿ ಹೊತ್ತಿರುವ ಹಾಗೆ ಅನಿಸತ್ತೆ. ಈಗಲೇ ಅವನ ಬಳಿ ಹೋಗಬೇಕು. ಅವನ ಜತೇಲೇ ಸದಾ ಇರಬೇಕು ನಾನು. ಅವನ ತಪಸ್ಸೇ ಸರಿಯಾದ ಆರ್ಯಧರ್ಮ. ನಾನೂ ಆ ಥರದ ತಪಸ್ಸನ್ನೇ ಮಾಡತೀನಿ. ಅವನನ್ನ ನೋಡದೆ ಇದ್ದರೆ ಬೆಂದು ಹೋಗತೀನಿ.

* * *

(ಇನ್ನೂ 7–8 ಶ್ಲೋಕದಲ್ಲಿ ಋಷ್ಯಶೃಂಗನ ಅಪ್ಪ, ಕಶ್ಯಪ—ಅವರೆಲ್ಲಾ ರಾಕ್ಷಸರು, ನಮ್ಮಂಥವರನ್ನು ದಾರಿ ತಪ್ಪಿಸುವುದಕ್ಕೇ ಹೀಗೆಲ್ಲಾ ವೇಷ ಹಾಕಿಕೊಂಡು ಮರುಳು ಮಾಡುತ್ತಾರೆ, ಅಂಥವರನ್ನ ನೋಡಲೇಬಾರದು, ಅವರು ಪಿಶಾಚಿಗಳು ಎಂದೆಲ್ಲ ಮಗನಿಗೆ ಹೆದರಿಸುತ್ತಾನೆ, ಬಂದದ್ದು ಯಾರಿರಬಹುದು ಎಂದು ಸುತ್ತಮುತ್ತಲೆಲ್ಲ ಹುಡುಕಾಡುತ್ತಾನೆ. ಎಲ್ಲೂ ಕಾಣಲ್ಲ. ಸ್ವಲ್ಪ ದಿನ ಆದಮೇಲೆ ಹಣ್ಣು ಆಯಲು ಕಶ್ಯಪ ಕಾಡಿಗೆ ಹೋಗುತ್ತಾನೆ. ಅವನು ಹೊರಟದ್ದೇ ತಡ ಆ ಚತುರ ಎಳೆಯ ಚೆಲುವೆ ಋಷ್ಯಶೃಂಗನ ಬಳಿ ಬರುತ್ತಾಳೆ)

ಅವಳನ್ನು ನೋಡಿದ್ದೇ ತಡ ಖುಷಿ ಉಕ್ಕಿತು–ಒಡನೇ ಗೊಂದಲವೂ. ಅವಳ ರೂಪ ನೋಡತಾ ನೋಡತಾ, 'ನಮ್ಮಪ್ಪ ಬರೋದರೊಳಗಾಗಿ ನಿಮ್ಮಾಶ್ರಮಕ್ಕೆ ಹೋಗಿಬಿಡೋಣ' ಅಂದ.

(ಎಂದವನು ಹೊರಟುಬಿಡುತ್ತಾನೆ. ಹಾಗೇ ಅವನನ್ನ ಅಯೋಧ್ಯೆಗೆ ಕರಕೊಂಡು ಬಂದರು. ರಾಜನ ಮಗಳನ್ನ ಮದುವೆ ಆದ.)

(ಸಶೇಷ)

# ಪ್ರತಿಕ್ರಿಯೆ

## ಆಸ್ಕರ್ ವೈಲ್ಡನ ನೈಟಿಂಗೇಲ್ಸ್

### ಕುತೂಹಲದಿಂದ ಕೂಡಿದ ಧಾರಾವಾಹಿ

ಕೇಶವರೆಡ್ಡಿ ಹಂದ್ರಾಳ ಅವರ ಧಾರಾವಾಹಿ ಅತ್ಯುತ್ತಮವಾಗಿ ಮೂಡಿಬಂದಿತು. ಯಾವಾಗ ಗುರುವಾರ ಬರುತ್ತದೆ ಎಂದು ಕಾಯುವಂತಾಗಿತ್ತು. ಅಮೆರಿಕದ 'ಲಾಸ್ ವೆಗಾಸ್' ನಗರದ ಪರಿಚಯ ಮತ್ತು ಮುಂಬಯಿ ನಗರದ ಒಳ ಹಾಗೂ ಹೊರಜಗತ್ತಿನ ಪರಿಚಯವಾಗಿದ್ದು ಸಂತಸವಾಯಿತು. ಧಾರಾವಾಹಿ ಕೊನೆಗೊಂಡಿದ್ದಕ್ಕೆ ಬೇಸರ.

—ಬಿದರಹಳ್ಳಿ ಚನ್ನವೀರಪ್ಪ ಹಿರೇಹಡಗಲಿ

### ಗಟ್ಟಿಯಾದ ನಿರೂಪಣೆ

ಮೂರು ತಿಂಗಳ ಕಾಲ ನಿರಂತರವಾಗಿ ಮೂಡಿಬಂದ ಧಾರಾವಾಹಿಯು ಓದಿಸಿಕೊಂಡು ಹೋಗುವುದರಲ್ಲಿ ಯಶಸ್ವಿಯಾಗಿದೆ. ಪಾತ್ರಗಳ ಚಿತ್ರಣ, ವೈವಿಧ್ಯಮಯ ಕಥೆ, ಸರಳ ಪದಗಳ ಜೋಡಣೆ, ಗಟ್ಟಿಯಾದ ನಿರೂಪಣೆ ಮೆಚ್ಚುವಂಥದ್ದು. ಕಥೆ ಇಷ್ಟು ಬೇಗ ಮುಗಿಯುತ್ತೆಂದು ನಿರೀಕ್ಷೆ ಮಾಡಿರಲಿಲ್ಲ.

—ಶಂಕರಗೌಡ ವೈ. ಪಾಟೀಲ, ಬಾದಾಮಿ

### ಮುಂಬಯಿಯ ಪರಿಚಯ

ಧಾರಾವಾಹಿಯ ಮೂಲಕ ಮುಂಬೈಯ ಜನಜೀವನದ ಬಗ್ಗೆ ತಿಳಿದುಕೊಂಡಾಯಿತು. ಕೋಟ್ಯಧೀಶ್ವರನಾಗಿದ್ದರೂ ಗುನ್ನಾಲಾಲ್ ಹಾಗೂ ಅವರ ಕುಟುಂಬದವರ ಪ್ರಾಮಾಣಿಕತೆ ಹಾಗೂ ಸರಳತನ ಮನಸ್ಸಿಗೆ ಮೆಚ್ಚುಗೆ ಆಯ್ತು. ಕೇಶವರೆಡ್ಡಿ ಹಂದ್ರಾಳ ಅವರ ಬರವಣಿಗೆ ಓದುತ್ತಿದ್ದರೆ ನಿಜ ಜೀವನದಲ್ಲಿ ನಡೆಯುವ ಘಟನೆಗಳಂತೆ ಭಾಸವಾಯಿತು. ಕೊನೆಯಲ್ಲಿ ಕೊಟ್ಟ ತಿರುವು ನನ್ನನ್ನು ಭಾವುಕಳನ್ನಾಗಿ ಮಾಡಿತು. ಸುಂದರವಾದ ಕಲೆಗೆ ಎಚ್.ಎಸ್. ಮೋನಪ್ಪ ಅವರಿಗೆ ಧನ್ಯವಾದಗಳು.

—ಕವಿತಾ ಅಶೋಕ್, ನೆಲಮಂಗಲ

### ಸಿನಿಮಾ ನೋಡಿದಂತಾಯಿತು

ಧಾರಾವಾಹಿ ಒಂದು ಸಿನಿಮಾ ನೋಡಿದ ಅನುಭವ ಉಂಟುಮಾಡಿತು. ಮುಂಬಯಿಯ ಸಂಪೂರ್ಣ ಜಗತ್ತನ್ನು ಲೇಖಕರು ತುಂಬಾ ಚೆನ್ನಾಗಿ ಕಟ್ಟಿಕೊಟ್ಟಿದ್ದಾರೆ. ಆಸ್ಕರ್ ತನ್ನ ಕನಸಿನ ರಾಣಿಯನ್ನು ಪಡೆಯಲು ನಡೆಸಿದ ತಿರುವುಗಳು ಸ್ವಾರಸ್ಯಕರ ಹಾಗೂ ಕುತೂಹಲದಿಂದ ಕೂಡಿದ್ದು ಅವನ ಆಸೆ ನೆರವೇರಿದ್ದು ಮುದ ನೀಡಿತು. ಅಂತ್ಯದಲ್ಲಿ ತಂದೆ ಗುನ್ನಾಲಾಲ್ ತಾನು ಮಾಡಿದ ಕೃತ್ಯದ ಪರಿಣಾಮ ಮಗನ ಮದುವೆ ಮುಖಾಂತರ ಪರಿಹಾರವಾಗಿದ್ದು ಸರಿ ಅನಿಸಿತು.ಭಾಷಾ ಶೈಲಿ, ಮೋನಪ್ಪನವರ ಕಲೆ ಸುಂದರವಾಗಿತ್ತು.

—ಭಾರತೀ ಗಂಗಾಧರ್, ಬೆಂಗಳೂರು

### ಹೊರ-ಒಳ ಹೂರಣ ಉಣಬಡಿಸಿತು

ನಿಜವಾಗಿಯೂ ನಮ್ಮನ್ನು ಮುಂಬೈ ಜಗತ್ತಿನ ವಾಸ್ತವ ಜಗತ್ತಿನಲ್ಲಿ ಸುತ್ತಾಡಿಸಿ ಅದರ ಹೊರ ಒಳ ಹೂರಣವನ್ನು ಉಣಬಡಿಸಿ ಆಸ್ಕರ್ ವೈಲ್ಡನ ಕನಸಿನ ರಾಣಿಯ ಹುಡುಕಾಟದಲ್ಲಿ ನಿಜ ಜಗತ್ತಿನ ಹಣ ಅಮಲು, ಹೆಣ್ಣು ಭೋಗದ ಜಗತ್ತಿನ ಜನರು ಹೇಗೆ ವರ್ತಿಸುತ್ತಾರೆ ಎಂಬುದನ್ನು ಚಿತ್ರಿಸುತ್ತಾ ನಾವು ಅದರ ಒಳಗೆ ಮುಳುಗೇಳುವಂತೆ ಮಾಡಿದ ಲೇಖಕರಿಗೆ ವಂದನೆಗಳು. ಬಹುಬೇಗ ಅಂತ್ಯವಾಗಿದ್ದು ತುಸು ಬೇಸರ ತರಿಸಿತು. ಅಂತ್ಯ ಮತ್ತಷ್ಟು ರೋಚಕವಾಗಿದ್ದರೆ ಚೆನ್ನಿರುತ್ತಿತ್ತು.

—ವಿಜಯ್ ಮಂಜುನಾಥ್

### ಹೊಸ ಪ್ರಪಂಚದ ಅನಾವರಣ

ಆಸ್ಕರ್ ವೈಲ್ಡ್, ಗುನ್ನಾಲಾಲರನ್ನು ಕೇಂದ್ರಬಿಂದುವಾಗಿ ಇಟ್ಟುಕೊಂಡು, ನಾನಾ ಬಗೆಯ ಜನ, ಅವರ ಜೀವನವನ್ನು ಅವಲೋಕಿಸುತ್ತ ಹೋಗುವ ಕಥಾನಕ, ಹತ್ತು ಹಲವು ಮಜಲುಗಳಲ್ಲಿ ನಮ್ಮ ಮುಂದೆ ಒಂದು ಹೊಸ ಪ್ರಪಂಚವನ್ನೇ ಬಿಚ್ಚಿಡುತ್ತಾ ಸಾಗುತ್ತದೆ. ಹೊರಗಡೆಯಿಂದ ಥಳುಕು ಬಳುಕಾಗಿ ಕಾಣುವ ಜಗತ್ತಿನ ಒಳನೋಟ, ಅದರೊಳಗೆ ಹುದುಗಿರುವ ಸತ್ಯದ ಅನಾವರಣ ಬೆಚ್ಚಿ ಬೀಳಿಸುತ್ತದೆ. ಆಸ್ಕರ್ ವೈಲ್ಡ್ ತನ್ನ ಜೀವನದಲ್ಲಿ ಪ್ರವೇಶಿಸುವ ಹೊಸ ವ್ಯಕ್ತಿಗಳ, ಹುಡುಗಿಯರ, ತನ್ಮೂಲಕ ಪಡೆದುಕೊಳ್ಳುವ ಹೊಸ ಅನುಭವಗಳ ಜೊತೆಯಲ್ಲೇ ಬೆಳೆಯುತ್ತಾ ಹೋಗುವ ಕಥಾಹಂದರ ಆಸಕ್ತಿದಾಯಕವಾಗಿದೆ. ಒಂದು ಕಡೆ ತನ್ನ ಮೊಮ್ಮಗನ ಬೆನ್ನ ಹಿಂದೆ ನಿಂತು, ತನ್ನ ವ್ಯವಹಾರಗಳನ್ನು ವಿಸ್ತರಿಸುತ್ತಾ ಹೋಗುವ ಗುನ್ನಾಲಾಲನ ಪ್ರಬುದ್ಧ ವ್ಯಕ್ತಿತ್ವ. ಇನ್ನೊಂದು ಕಡೆ ತನ್ನ ಕನಸಿನ ಹುಡುಗಿಯನ್ನು ಹುಡುಕುತ್ತಾ ಹೊರಟ ಸೋನಾಲಾಲ್ ಪಡೆದುಕೊಳ್ಳುವ ಜೀವನದ ಪಾಠಗಳಿಂದ ತನ್ನನ್ನು ತಾನು ಅರ್ಥ ಮಾಡಿಕೊಳ್ಳುತ್ತಾ ಹೋಗುವ ಪರಿ ಚೆನ್ನಾಗಿ ನಿರೂಪಿತವಾಗಿದೆ.

—ಬಿ.ವಿ. ರಾಜಲಕ್ಷ್ಮಿ, ಬೆಂಗಳೂರು